**ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.**

**ಸಿ. ಸಿ. ನಂಬರಃ 433/2025**

**ಫಿರ್ಯಾದುದಾರರು:**

ಶ್ರೀ ಸೈಯ್ಯದ ಜುಲ್ ಕಫೀಲ್ ತಂದೆ ಸೈಯದ
ಮಹಮ್ಮದ ರಫಿಕ ಇನಾಮದಾರ,
ಸಾ: ವಾಯ್.ಬಿ. ರೋಡ,ತಾ: ಮುಂಡಗೋಡ, ಉ.ಕ.

**- ವಿರುದ್ಧ -**

**ಆರೋಪಿತ :**

ಶ್ರೀ ಸುರೇಶ ತಂದೆ ಅರ್ಜುನ ಕುಳ್ಳೋಳ್ಳಿ,
ವೃತ್ತಿ: ಎ.ಸಿ.ಎಫ್, ಅರಣ್ಯ ಇಲಾಖೆ,
ಸಾ: ಎ.ಸಿ.ಎಫ್. ಆಫಿಸ್ ಅರಣ್ಯ ಇಲಾಖೆ ಸೊರಬ,
ಜಿಲ್ಲಾ: ಶಿವಮೊಗ್ಗ.

**ಆಪಾದನೆ**

ಆರೋಪಿತರಾದ ನೀವು ಪಿರ್ಯಾದುದಾರರಿಗೆ ಪರಿಚಯಸ್ಥರಿದ್ದು, ನೀವು ಅರಣ್ಯ ಇಲಾಖೆಯಲ್ಲಿ ವಲಯ ಅರಣ್ಯ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದು, ಸರ್ಕಾರದಿಂದ ಅರಣ್ಯ ಇಲಾಖೆಯಲ್ಲಿ ಸಸಿ ನೆಟ್ಟುವ ಮತ್ತು ಕಾಮಗಾರಿ ಕೆಲಸ ಮಾಡಬೇಕಾಗಿದ್ದು ನೀವು ಮೊದಲು ಕೆಲಸ ನಿಮ್ಮ ಸ್ವಂತ ಖರ್ಚಿನಲ್ಲಿ ಮಾಡಿಸಿ ತದನಂತರ ಬಿಲ್ಲನ್ನು ಪಡೆಯಬೇಕಾಗುತ್ತದೆ, ಆ ಕಾರಣದಿಂದ ಆರೋಪಿಯಾದ ನೀವು ಫಿರ್ಯಾದಿಯವರಿಂದ ರೂ.9,60,000/- ಹಣವನ್ನು ಕೈಗಡ ಸಾಲವಾಗಿ ಬೇಡಿದ್ದು, ಸದರಿ ಹಣವನ್ನು ಸರ್ಕಾರದ ಬಿಲ್ಲ ಆದ ತಕ್ಷಣ ಕೋಡುವುದಾಗಿ ಹೇಳಿದ್ದರಿಂದ ನಿಮ್ಮ ಮಾತನ್ನು ನಂಬಿ ಫಿರ್ಯಾದಿದಾರರು ಅವರ ತಂದೆಯ ಮಾತಿನಂತೆ ಮನೆಯಲ್ಲಿರುವ ಅವರ ತಾಯಿಯ ಬಂಗಾರದ ಒಡವೆಗಳನ್ನು ತಾಮೀರ ಕೋ-ಆಫ್ ಸೊಸೈಟಿಯಲ್ಲಿ ಅಡವಿಟ್ಟು ರೂ.7,10,000/-ಗಳನ್ನು ಹಾಗೂ ರೂ.2,50,000/-ಗಳನ್ನು ಓ.ಡಿ. ಸಾಲವನ್ನು ಅದೇ ಬ್ಯಾಂಕಿನಲ್ಲಿ ಸಾಲ ಮಾಡಿ ಒಟ್ಟೂ ರೂ.9,60,000/-ಗಳನ್ನು ನಿಮಗೆ ಕೈಗಡ ಸಾಲವಾಗಿ ನೀಡಿರುತ್ತಾರೆ. ಆದರೆ ನೀವು ಮಾತಿನಂತೆ ನಡೆದುಕೊಳ್ಳದೆ ಇಂದು ನಾಳೆ ಅಂತಾ ವಿಳಂಬ ಮಾಡುತ್ತಾ ಬಂದಿರುತ್ತಿರಿ. ತದನಂತರ ನೀವು

ನಿಮ್ಮ ಖಾತೆ ಇರುವ ಎಸ್.ಬಿ.ಐ ಬ್ಯಾಂಕ, ಯಲ್ಲಾಪೂರ ಶಾಖೆ ಚೆಕ್ಕ ನಂಬರ್ 275938 ದಿನಾಂಕ 11-04-2025 ಎಂದು ನಮೂದಿಸಿದ ಒಟ್ಟು ರೂ.9,60,000/-ಗಳ ಮೊತ್ತಕ್ಕೆ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸದ್ರಿ ಚೆಕ್ಕನ್ನು ಅವರ ಖಾತೆ ಇರುವ ಎಸ್.ಬಿ.ಐ ಮುಂಡಗೋಡ ಶಾಖೆಗೆ ದಿನಾಂಕ 17-04-2025 ರಂದು ಸದರಿ ಬ್ಯಾಂಕಗೆ ನಗಧೀಕರಣಕ್ಕಾಗಿ ಹಾಜರ ಪಡಿಸಿದಾಗ, ನೀವು ಹೊಂದಿರುವ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ- FUNDS INSUFFICIENT" ಎಂದು ನಮೂದು ಮಾಡಿ ದಿನಾಂಕಃ 17-04-2025 ರಂದು ಮೇಮೋದೊಂದಿಗೆ  ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 05-06-2025 ರಂದು ತಮ್ಮ ವಕೀಲರ ಮೂಲಕ ನೋಟಿಸ್‌ನ್ನು ನಿಮಗೆ ನೀಡಿದ್ದು, ಸದರಿ ನೋಟಿಸ್ಸು ನಿಮ್ಮಗೆ ದಿನಾಂಕ 09-05-2025 ರಂದು ಸ್ವತಃ ಜಾರಿಯಾಗಿದರೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ -

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ -

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ  25-11-2025

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ.